**ದಿನಾಂಕಃ 18.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**8.** ಚೆಕ್ ನಂ.677965 ದಿ.25.02.2020 ಅನ್ನು ಅಸಲಿ ಮೊತ್ತಕ್ಕಾಗಿ ಅಥವಾ ಬಡ್ಡಿಗಾಗಿ ಪಡೆದುಕೊಂಡಿದ್ದಿರೋ ಎಂದರೆ ಸಾಕ್ಷಿಯು 10 ತಿಂಗಳ ಬಡ್ಡಿಯ ಮೊತ್ತಕ್ಕಾಗಿ ಆರೋಪಿ ಚೆಕ್ಕು ನೀಡಿದ್ದರು. ನಾವು ವಾರ್ಷಿಕ ಶೇಕಡ 16 ರಷ್ಟು ಬಡ್ಡಿಯನ್ನು ವಿಧಿಸುತ್ತೇವೆ. ಆರೋಪಿಯಿಂದ 10 ಹೊಸ ಚೆಕ್ಕುಗಳನ್ನು ಪಡೆದುಕೊಂಡ ಬಗ್ಗೆ ನಿಮ್ಮ ಲೆಕ್ಕ ಪುಸ್ತಕದಲ್ಲಿ ನಮೂದಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಚೆಕ್ಕುಗಳನ್ನು ಬ್ಯಾಂಕಿಗೆ ಹಾಜರಪಡಿಸಿದ ತಕ್ಷಣ ಲೆಕ್ಕ ಪುಸ್ತಕದಲ್ಲಿ ನಮೂದಾಗುತ್ತದೆ ಎಂದು ನುಡಿಯುತ್ತಾರೆ. 10 ಚೆಕ್ಕುಗಳನ್ನು ಬ್ಯಾಂಕಿಗೆ ಹಾಜರುಪಡಿಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಬ್ಯಾಂಕ್ ಸ್ಟೇಟ್ ಮೆಂಟನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿ ಡಿಸೆಂಬರ್ 2020 ರಲ್ಲಿ ಸಾಲ ಪಡೆದುಕೊಂಡ ವೇಳೆಯಲ್ಲಿ ಕೊಟ್ಟಂತಹ ಚೆಕ್ಕುಗಳಾಗಿದ್ದು ಅವು ಹೊಸ ಚೆಕ್ಕುಗಳಾಗಿರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಪಿರ್ಯಾದಿನಲ್ಲಿ 10 ಹಳೆಯ ಚೆಕ್ಕುಗಳ ನಂಬರುಗಳು ಹಾಗೂ ಹೊಸ 10 ಚೆಕ್ಕುಗಳ ನಂಬರುಗಳನ್ನು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹಳೆಯ ಚೆಕ್ಕುಗಳನ್ನು ವಾಪಸ್ ಪಡೆದುಕೊಂಡ ಕಾರಣ ಹೊಸ ಚೆಕ್ಕುಗಳನ್ನು ನಮೂದಿಸಿರುತ್ತೇವೆ ಎಂದು ನುಡಿಯುತ್ತಾರೆ. 10 ಹಳೆಯ ಚೆಕ್ಕುಗಳನ್ನು ಆರೋಪಿಗೆ ಹಿಂದಿರುಗಿಸಿರುವ ಬಗ್ಗೆ ನಿಮ್ಮ ಲೆಕ್ಕ ಪುಸ್ತಕದಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ಹಳೆಯ ಚೆಕ್ಕುಗಳನ್ನು ಹಿಂದಿರುಗಿಸಿದ ಕಾರಣ ಹೊಸ ಚೆಕ್ಕುಗಳ ನಂಬರುಗಳನ್ನು ಮಾತ್ರ ಬರೆದಿರುತ್ತೇವೆ ಎಂದು ನುಡಿಯುತ್ತಾರೆ.

**ಪಿಡಬ್ಲೂ.1:ಶ್ರೀ. ವಿ. ರಾಧಕೃಷ್ಣನ್.,**

**9.** ನಿಮ್ಮ ಪಿರ್ಯಾದಿನ 7 ನೇ ಖಂಡಿಕೆಯ ಪ್ರಕಾರ ಅಲ್ಲಿ ನಮೂದಿಸಿರುವಂತಹ ಎಲ್ಲಾ ಚೆಕ್ಕುಗಳು ಡಿಸೆಂಬರ್ 2020 ರಲ್ಲಿ ನೀಡಿರುವ ಚೆಕ್ಕುಗಳಾಗಿದ್ದು, ಆದರೆ ಅದನ್ನು ನೀವು ದುರುಪಯೋಗಪಡಿಸಿಕೊಂಡು ಕೇವಲ ಒಂದು ದಿನದ ಅಂತರದಲ್ಲಿ ದಿನಾಂಕವನ್ನು ನಮೂದಿಸಿ ದುರುಪಯೋಗಪಡಿಸಿಕೊಂಡು ಬ್ಯಾಂಕಿಗೆ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಆರೋಪಿ ಹೇಳಿದ ದಿನಾಂಕದಂದೇ ಬ್ಯಾಂಕಿಗೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನೀವು ಆರೋಪಿಯೊಂದಿಗೆ ಕಾನೂನು ಬಾಹಿರವಾಗಿ ವ್ಯವಹಾರ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಸಾಲ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಮಗೆ ಯಾವುದೇ ಬಾಕಿ ಹಣ ನೀಡಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಆರ್ಥಿಕ ಸಂಕಷ್ಟಕ್ಕೆ ಒಳಪಡಿಸಿ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.